**–:<u>ಮಧ್ಯಂತರ ಅರ್ಜಿ ಸಂಖ್ಯೆ 2 ರ ಮೇಲಿನ ಆದೇಶ</u>:–**

ವಾದಿಯು, ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಜೊತೆಗೆ ಮಧ್ಯಂತರ ಅರ್ಜಿ ಸಂಖ್ಯೆ 2 ನ್ನು ಸಿ.ಪಿ.ಸಿ., ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿ ದಾವಾ ವಿಚಾರಣೆ ಮುಗಿಯುವವರೆಗೆ ಪ್ರತಿವಾದಿ ಯಾ ಅವರ ಕಡೆಯವರು ದಾವಾ ಸ್ಥಳದಲ್ಲಿರುವ ಮನೆ ಸಂಖ್ಯೆ 2166 ನ್ನು ಬಲಾತ್ಕಾರವಾಗಿ ಪ್ರವೇಶ ಮಾಡಿ ವಾಸ್ತವ್ಯ ಮಾಡದಂತೆ ತಮ್ಮ ಪರವಾಗಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮಧ್ಯಂತರ ಅರ್ಜಿ ಸಂಖ್ಯೆ 2 ರ ಮೇಲಿನ ವಾದವನ್ನು ಆಲಿಸಲಾಯಿತು, ಮತ್ತು ಸದರಿ ದಾವೆಯಲ್ಲಿನ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು.

ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ದಾವಾ ಸ್ಥಳದ ಪಹಣಿ ಪತ್ರಿಕೆಯಲ್ಲಿ ವಾದಿಯ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ಅದರಂತೇ, ಮಂಕಿ ಪಟ್ಟಣ ಪಂಚಾಯತನವರು ಮನೆ ಸಂಖ್ಯೆ 2166 ಕ್ಕೇ ಸಂಬಂಧಪಟ್ಟಂತೆ ವಾದಿಯು ತೆರಿಗೆಯನ್ನು ಪಾವತಿಸಿರುವುದಾಗಿ ರಶೀದಿಯನ್ನು ನೀಡಿರುತ್ತಾರೆ. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ವಾದಿಯು ಹೂಡಿದ ಈ ದಾವೆಯು ಮೇಲ್ನೋಟಕ್ಕೆ ಸಮ್ಮತವಾದ ದಾವೆಯಾಗಿದೆ ಎಂದು

ಕಂಡುಬರುತ್ತದೆ. ಒಂದು ವೇಳೆ, ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಿದರೆ, ವಾದಿಯು ಪರಿಹಾರ ಪಡೆಯಲು ಮತ್ತೊಂದು ಪ್ರಕ್ರಿಯೆಯಲ್ಲಿ ಭಾಗಿಯಾಗುವ ಸಂಭವ ಉಂಟಾಗಬಹುದು, ಮತ್ತು ಕಛೇರಿಯಲ್ಲಿ ಪರಿಶೀಲಿಸಲಾಯಿತು, ಯಾವುದೇ ಎಚ್ಚರಿಕೆ ಅರ್ಜಿ (ಕೆವಿಯಟ್) ಇರುವುದಿಲ್ಲ. ಆದ್ದರಿಂದ ಈ ಮುಂದಿನಂತೆ ಆದೇಶಿಸುತ್ತೇನೆ.

**<u>ಆ ದೇ ಶ</u>**

ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 2 ನ್ನು ಭಾಗಶಃ ಪುರಸ್ಕರಿಸಲಾಗಿದೆ.

ಪ್ರತಿವಾದಿ ಯಾ ಅವರ ಕಡೆಯವರು ದಾವಾ ಸ್ಥಳದಲ್ಲಿರುವ ಮನೆ ಸಂಖ್ಯೆ 2166 ನ್ನು ಬಲಾತ್ಕಾರವಾಗಿ ಪ್ರವೇಶ ಮಾಡಿ ವಾಸ್ತವ್ಯ ಮಾಡದಂತೆ ಮುಂದಿನ ವಾಯಿದೆವರೆಗೆ ತಾತ್ಕಾಲಿಕವಾಗಿ ನಿರ್ಭಂಧಿಸಲಾಗಿದೆ.

ಪ್ರತಿವಾದಿಗೆ ಏಕಪಕ್ಷೀಯ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಪ್ರತಿ ಮತ್ತು ತುರ್ತು ನೋಟಿಸ್ ರವಾನಿಸಲು ಕಛೇರಿಗೆ ನಿರ್ದೇಶಿಸಲಾಗಿದೆ.

ಪ್ರತಿವಾದಿಗೆ ದಾವಾ ಸಮನ್ಸ್ ಹೊರಡಿಸಿರಿ.

ವಾದಿಯು ಸಿ.ಪಿ.ಸಿ. ಕ್ರಮಾದೇಶ 39 ನಿಯಮ 3(ಎ) ಮತ್ತು (ಬಿ) ನಿಯಮಗಳನ್ನು ಪರಿಪಾಲಿಸತಕ್ಕದ್ದು.

**ಮುಂದಿನ ವಿಚಾರಣೆ ದಿನಾಂಕಃ** 07.12.2024.

ಸಹಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ., ಹೊನ್ನಾವರ.